**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು**

**ಸಿಸಿ ಸಂಖ್ಯೆ: 1746/2025**

**ಫಿರ್ಯಾದುದಾರರು** : ಶ್ರೀ. ಸಿದ್ದರಾಜು. ಕೆ.ಕೆ.
ಬಿನ್ ಲೇಟ್ ಕೆಂಪರಾಜಯ್ಯ,
ವಯಸ್ಸು ಸುಮಾರು 43 ವರ್ಷ,
ವಾಸಃ ಕೆಂಪಿಸಿದ್ದನಹುಂಡಿ ಗ್ರಾಮ,
ಚಿಕ್ಕಯ್ಯನಛತ್ರ ಹೋಬಳಿ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ವಿರುದ್ಧ

**ಆರೋಪಿ** : ಶ್ರೀ. ಬಸವರಾಜು. ಎಂ.

:: **ಆಪಾದನೆ** ::

**ಶ್ರೀಮತಿ.ಶ್ರುತಿ ಶ್ರೀ. ಎಸ್. ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿಯಾದಃ-

ಶ್ರೀ .ಬಸವರಾಜು . ಎಂ ಬಿನ್ ಲೇಟ್ ಮಹದೇವ ಉಃ ಪುಕ್ಕ,
ವಯಸ್ಸು ಸುಮಾರು 38 ವರ್ಷ,
ವಾಸಃ ಹಳ್ಳಿಮರ ಬೀದಿ (ಅಂಗಡಿ ಬೀದಿ)
ಕೆ.ಎಂ. ಹುಂಡಿ, ಕಡಕೊಳ ಗ್ರಾಮ ಮತ್ತು ಅಂಚೆ,
ಜಯಪುರ ಹೋಬಳಿ, ಮೈಸೂರು ತಾಲ್ಲೂಕು.

ನಿವಾಸಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಫಿರ್ಯಾದುದಾರರು ಹಾಗೂ ಆರೋಪಿಯಾದ ನೀವು ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ನಿಮ್ಮ ಕಾನೂನುಬದ್ದ ಅವಶ್ಯಕತೆಗಾಗಿ ಫಿರ್ಯಾದುದಾರರಿಂದ ದಿನಾಂಕ **07.12.2024** ರಂದು ರೂ.**5,00,000/-** ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣವನ್ನು ಆರು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿದ್ದು, ಸದರಿ

ಸಾಲದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ಆರೋಪಿಯಾದ ನೀವು ನಂಜನಗೂಡು ತಾಲ್ಲೂಕಿನಲ್ಲಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್, ಕಡಕೊಳ ಶಾಖೆಯ ಚೆಕ್ ನಂಃ.419468 ರೂ.5,00,000/- ಹಣಕ್ಕೆ ದಿನಾಂಕ 13.06.2025 ಎಂದು ನಮೂದಿಸಿದ ಚೆಕ್ಕನ್ನು ನೀಡಿದ್ದು, ಪಿರ್ಯಾದುದಾರರು ಸದರಿ ಚೆಕ್‌ನ್ನು ನಗದೀಕರಣಕ್ಕಾಗಿ ನಂಜನಗೂಡಿನಲ್ಲಿರುವ ಕೆನರಾ ಬ್ಯಾಂಕ್, ಹೆಜ್ಜಿಗೆ ಶಾಖೆಯಲ್ಲಿ ದಿನಾಂಕ 13.06.2025 ರಂದು ಹಾಜರುಪಡಿಸಿದಾಗ, ನಿಮ್ಮ ಖಾತೆಯಲ್ಲಿ "**ಸಾಕಷ್ಟು ಹಣವಿಲ್ಲ**" ಎಂಬ ಹಿಂಬರಹದೊಂದಿಗೆ ದಿನಾಂಕ 16.06.2025 ರಂದು ಮಾನ್ಯವಾಗದೆ ವಾಪಸ್ಸಾಗಿರುತ್ತದೆ.

ನಂತರ ಪಿರ್ಯಾದಿಯು ತಮ್ಮ ವಕೀಲರ ಮೂಲಕ ದಿನಾಂಕ 05.07.2025 ರಂದು ನೊಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸನ್ನು ಆರೋಪಿಯಾದ ನೀವು ಉದ್ದೇಶಪೂರ್ವಕವಾಗಿ ಪಡೆದುಕೊಳ್ಳದೆ ತಿರಸ್ಕರಿಸಿದ್ದರಿಂದ, ಸದರಿ ನೋಟಿಸ್ "**Un-claimed returned to sender**" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿದ್ದು ಹಾಗು ಆರೋಪಿಯಾದ ನೀವು ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ, ಆ ಮೂಲಕ ಲಿಖಿತ ವರ್ಗಾವಣೀಯ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆಃ 1- ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೆ ?

ಆರೋಪಿ ಉತ್ತರ :

ಪ್ರಶ್ನೆಃ 2 ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?

ಆರೋಪಿ ಉತ್ತರ :

(ಮೇಲಿನ ಆಪಾದನೆಯನ್ನು ಆರೋಪಿಗೆ ನನ್ನ ಸಮಕ್ಷಮದಲ್ಲಿ ಓದಿ ಹೇಳಿ, ಆರೋಪಿ ಕೊಟ್ಟ ಉತ್ತರವನ್ನು ದಿನಾಂಕ 03.06.2026 ರಂದು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆ)

ದಿನಾಂಕಃ 03.06.2026.

**(ಶ್ರುತಿ ಶ್ರೀ. ಎಸ್.)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.